**ದಿ:02.06.2022ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಭೋದಿಸಿದೆ.**

**<u>ಮುಂದುವರಿದ ಮುಖ್ಯ ವಿಚಾರಣೆ ವಾದಿಪರಃ ಶ್ರೀಮತಿ ಆರ್ ಜೆ. ನ್ಯಾಯವಾದಿಗಳಿಂದಃ-</u>**

ನಾನು ಈ ದಿವಸ ನನ್ನ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿವೆ. ಪ್ರಮಾಣಪತಿತ್ರದ ಮೇಲೆ ಇರುವ ಸಹಿ ನನ್ನದೇ ಇರುತ್ತದೆ.

**ಮುಂದುವರೆದ ಮುಖ್ಯ ವಿಚಾರಣೆ ದಾಖಲಾತಿಗಳನ್ನು ಗುರುತಿಸಲು ಕಾಲಾವಕಾಶ ಕೋರಿರುತ್ತಾರೆ ಕೋರಿಕೆ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**(ಕೆಂಗಬಾಲಯ್ಯ)**
**42ನೇ ಅಪರ ನಗರ ಸಿವಿಲ್**
**ಮತ್ತು ಸತ್ರ ನ್ಯಾಯಾಧೀಶರು,**
**ಬೆಂಗಳೂರು ನಗರ.**

ದಿಃ26.10.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದೆ.

**ಮುಂದುವರಿದ ಮುಖ್ಯ ವಿಚಾರಣೆ ಶ್ರೀ ಕೆ.ಎಂ.ಕೆ. ವಕೀಲರಿಂದಃ-**

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸುತ್ತಿದ್ದೇನೆ.

| | |
|---|---|
| ನಿಪಿ.1 | ಓ.ಎಸ್.6444/2002 ರ ಸಾಕ್ಷ್ಯಪ್ರಮಾಣ ಪತ್ರದ ದೃಢೀಕೃತ ನಕಲು |
| ನಿಪಿ.2 | ಭೂ ನ್ಯಾಯ ಮಂಡಳಿಯ ಆದೇಶದ ದೃಢೀಕೃತ ನಕಲು |
| ನಿಪಿ.3 | ಭೂ ನ್ಯಾಯ ಮಂಡಳಿಗೆ ಎಲ್.ಆರ್.ಎಫ್ ನೀಡಿರುವ ಅರ್ಜಿಯ ನಕಲು |
| ನಿಪಿ.4 | ಆದೇಶ ಪುಟಗಳ ದೃಢೀಕೃತ ನಕಲು |
| ನಿಪಿ.5 | ದಿಃ15.02.1982 ರ ಆದೇಶದ ನಕಲು |
| ನಿಪಿ.6 | ಸಾಕ್ಷಿ ರುದ್ರಮರಿಯಪ್ಪರವರ ಹೇಳಿಕೆಯ ನಕಲು |
| ನಿಪಿ.7 ರಿಂದ 9 | ಪಹಣಿ ಪತ್ರಿಕೆಯ ಮೂರು ನಕಲುಗಳು |

**ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ.**

**(ಲಕ್ಷ್ಮೀನಾರಾಯಣ ಭಟ್.ಕೆ.)**
42ನೇ ಅಪರ ನಗರ ಸಿವಿಲ್
ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ನಗರ.

ದಿಃ **11.11.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದೆ.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಐ.ಪಿ.ವಕೀಲರಿಂದಃ-

1. ನಾನು ಹತ್ತನೆ ತರಗತಿವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಈ ದಾವೆಯನ್ನು ಸರ್ವೆ ನಂ.61 ಕುರಿತು ಹಾಕಿದ್ದೇನೆ. ಆದರೆ ಸೈಟ್ ನಂಬರ್ ನನಗೆ ಜ್ಞಾಪಕವಿಲ್ಲ. ಸೈಟ್ ನಂ.89 ಇದಕ್ಕೆ ಬಿಬಿಎಂಪಿ ರವರು 55/279/89 ನಂಬರ್ ಕೊಟ್ಟಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ನಾವು ವಾದಪತ್ರವನ್ನು ಓದಿ ತಿಳಿದುಕೊಂಡು ಸಹಿ ಮಾಡಿ ಹಾಕಿದ್ದೇವೆ ಅಂದರೆ ಹೌದು. ನಾವು ಈ ದಾವೆಯನ್ನು ಶ್ರೀಧರ್ ಇವರ ಮೇಲೆ ಹಾಕಿದ್ದೇವೆ. ಇದೇ ಆಸ್ತಿ ಕುರಿತು ಪ್ರತಿವಾದಿಯು ನಮ್ಮ ಮೇಲೆ ಓ.ಎಸ್.25111/2019 ಸಲ್ಲಿಸಿದ್ದಾರೆ ಅಂದರೆ ಹೌದು ಮತ್ತು ಅದು ಮೇಯೋಹಲ್ ದಲ್ಲಿರುವ ಸಿಸಿಹೆಚ್.21 ರ ಮುಂದೆ ಚಾಲ್ತಿ ಇದೆ ಮತ್ತು ಅದರಲ್ಲಿಯ ವಾದಿಯ ಸಾಕ್ಷ್ಯ ಆಗಿದೆ ಅಂದರೆ ಹೌದು.

ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

**(11.11.2025)**

(ಚೆನ್ನಣ್ಣವರ ಆರ್.ಎಸ್.)
**42** ನೇ ಅಪರ ನಗರ ಸಿವಿಲ್
ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು.

*OS.1688/2010*
*DW-3*

*OS.1688/2010*
*DW-3*